# ಕರ್ನಾಟಕ ಸರ್ಕಾರ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು-09

ಸಂಖ್ಯೆ:ಲಿಪಿಕ(1)199/2019-20 ದಿನಾಂಕ:29.02.2020

### ಸುತ್ತೋಲೆ

ವಿಷಯ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರ/ಶೀಘ್ರಲಿಪಿಗಾರರುಗಳಿಗೆ ಕಛೇರಿ ಅಧೀಕ್ಷಕರುಗಳ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: 1) ಪ್ರಥಮ ದರ್ಜೆ ಸಹಾಯಕರ ಅಂತಿಮ ಜೇಷ್ಠತಾ ಪಟ್ಟಿ ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂ: ಲಿಪಿಕ(1)191/2019-20, ದಿನಾಂಕ:29.02.2020.

2) ಶೀಘ್ರಲಿಪಿಗಾರರ ಅಂತಿಮ ಜೇಷ್ಠತಾ ಪಟ್ಟಿ ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂ: ಲಿಪಿಕ(1)192/2019-20, ದಿನಾಂಕ:29.02.2020.

* * * * *

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು/ ಶೀಘ್ರಲಿಪಿಗಾರರುಗಳಿಗೆ ಕಛೇರಿ ಅಧೀಕ್ಷಕರುಗಳ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಪದೋನ್ನತಿ ನೀಡುವ ಸಲುವಾಗಿ ಉಲ್ಲೇಖದನುಸಾರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹ ನೌಕರರುಗಳಿಗೆ **karunadu.karnataka.gov.in/hfw** ರಲ್ಲಿ ಉಲ್ಲೇಖ(1)ಮತ್ತು(2)ರನುಸಾರ ದಿನಾಂಕ 29.02.2020 ರಂದು ಪ್ರಕಟಿಸಲಾಗಿರುವ ಅಂತಿಮ ಜೇಷ್ಠತಾ ಪಟ್ಟಿಯಂತೆ ಈ ಕೆಳಕಂಡ ಜೇಷ್ಠತಾ ಸಂಖ್ಯೆಯ ನೌಕರರು ದೃಢೀಕೃತ ದಾಖಲಾತಿಗಳೊಂದಿಗೆ ಕಾರ್ಯ ನಿರ್ವಹಣಾ ವರದಿ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸುವುದು.

**ಪ್ರಥಮ ದರ್ಜೆ ಸಹಾಯಕರು**

| | | |
|---|---|---|
| | **ಕಲ್ಯಾಣ ಕರ್ನಾಟಕ ಭಾಗದ ನೌಕರರು** | |
| 01 | ಸಾಮಾನ್ಯ ವರ್ಗ | ಜೇಷ್ಠತಾ ಸಂಖ್ಯೆ 01 ರಿಂದ 75 |
| 02 | ಪರಿಶಿಷ್ಟ ಜಾತಿ/ಪಂಗಡ | ಜೇಷ್ಠತಾ ಸಂಖ್ಯೆ 01 ರಿಂದ 90 |
| | **ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರು** | |
| 01 | ಸಾಮಾನ್ಯ ವರ್ಗ | ಜೇಷ್ಠತಾ ಸಂಖ್ಯೆ 01 ರಿಂದ 500 |
| 02 | ಪರಿಶಿಷ್ಟ ಜಾತಿ | ಜೇಷ್ಠತಾ ಸಂಖ್ಯೆ 01 ರಿಂದ 500 |
| 03 | ಪರಿಶಿಷ್ಟ ಪಂಗಡ | ಜೇಷ್ಠತಾ ಸಂಖ್ಯೆ 01 ರಿಂದ 600 |

**ಶೀಘ್ರ ಲಿಪಿಗಾರರು**

| | | |
|---|---|---|
| | **ಕಲ್ಯಾಣ ಕರ್ನಾಟಕ ಭಾಗದ ನೌಕರರು** | |
| 01 | ಸಾಮಾನ್ಯ ವರ್ಗ/ಪರಿಶಿಷ್ಟ ಜಾತಿ/ಪಂಗಡ | ಜೇಷ್ಠತಾ ಸಂಖ್ಯೆ 01 ಮತ್ತು 02 |
| | **ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರು** | |
| 01 | ಸಾಮಾನ್ಯ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ | ಜೇಷ್ಠತಾ ಸಂಖ್ಯೆ 01 ರಿಂದ 07 |

1. ಐದು ವರ್ಷಗಳ ಕಾರ್ಯ ನಿರ್ವಹಣಾ ವರದಿ ನಿಗದಿತ ನಮೂನೆ (4,5,6 ಮತ್ತು 7 ನಿಯಮ) ಎ) ಭಾಗ–I ವೈಯಕ್ತಿಕ ಮಾಹಿತಿ. ಬಿ) ಭಾಗ–II ಸ್ವಯಂ ಮೌಲ್ಯ ಮಾಪನ. ಸಿ) ಭಾಗ–III ವರದಿ. ಡಿ)ಭಾಗ– IV ಪುನರಾವಲೋಕನ. ಇ)ಭಾಗ–V ಅಂಗೀಕಾರ. ಎಫ್) ಭಾಗ–VI ಸಂವಹನ. 2015–16, 2016–17, 2017–18, 2018–19, 2019–20 ರವರೆಗೆ ಪ್ರತಿ ವರ್ಷಕ್ಕೆ ಪ್ರತ್ಯೇಕವಾಗಿ ಸಲ್ಲಿಸುವುದು. **(ನಿಗದಿತ ಮಾದರಿಯಲ್ಲಿ ಸಲ್ಲಿಸದ ಕಾರ್ಯ ನಿರ್ವಹಣಾ ವರದಿಗಳನ್ನು ತಿರಸ್ಕರಿಸಲಾಗುವುದು)**
2. **ಪದೋನ್ನತಿಗೆ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ಜೇಷ್ಠತಾ ಸಂಖ್ಯೆಯನ್ನು ನಮೂದಿಸುವುದು.**
3. ಎಸ್.ಎಸ್.ಎಲ್.ಸಿ. ಅಂಕಪಟ್ಟಿ: ಜನ್ಮ ದಿನಾಂಕದೊಂದಿಗೆ ಕನ್ನಡ ಭಾಷಾ ಪರೀಕ್ಷೆ ಪಾಸು ಮಾಡಿರುವ ಬಗ್ಗೆ ಮತ್ತು ಕನ್ನಡ ವಿನಾಯಿತಿ ಪ್ರಮಾಣ ಪತ್ರ.
4. ನೇಮಕಾತಿ ಆದೇಶ/ಪದೋನ್ನತಿ ಹೊಂದಿದ ಆದೇಶ.
5. ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ ಪತ್ರ.
6. ಅಕೌಂಟ್ಸ್ ಹೈಯರ್ ಉತ್ತೀರ್ಣರಾದ ಪ್ರಮಾಣ ಪತ್ರ.
7. ಪರಿಶಿಷ್ಠ ಜಾತಿ ಪರಿಶಿಷ್ಟ ಪಂಗಡಗಳ ಇತ್ತೀಚಿನ ಪ್ರಮಾಣ ಪತ್ರ ಹಾಗೂ ಈ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಮತ್ತು ಸೇವೆಗೆ ಸೇರುವಾಗ ಯಾವ ಪ್ರವರ್ಗದಡಿ ನೇಮಕಗೊಂಡಿರುತ್ತಾರೆ.

8. ಶೀಘ್ರಲಿಪಿಗಾರರು ಐದು ವರ್ಷದ ಸೇವೆಯೊಂದಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ತರಬೇತಿ ಹೊಂದಿರುವ ದೃಢೀಕರಣ ಪತ್ರ.

9. **ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012, (ತಿದ್ದುಪಡಿ) 2017 ರಂತೆ ಕಡ್ಡಾಯವಾಗಿ ಕಿಯೋನಿಕ್ಸ್ ನಿಂದ ಆನ್‌ಲೈನ್‌ನಲ್ಲಿ ಗಣಕ ಯಂತ್ರ ಸಾಕ್ಷರತಾ ಪರೀಕ್ಷೆ ಉತ್ತೀರ್ಣರಾಗಿರುವ ಅಂಕಪಟ್ಟಿ/ಪ್ರಮಾಣ ಪತ್ರ.** (ದಿನಾಂಕ:07.03.2012ಕ್ಕೆ 50 ವರ್ಷ ಪೂರ್ಣಗೊಂಡಿರುವ ನೌಕರರಿಗೆ ಅನ್ವಯಿಸುವುದಿಲ್ಲ.)

10. ನೌಕರರ ವಿರುದ್ಧ ಇಲಾಖಾ ವಿಚಾರಣೆ: ಕ್ರಿಮಿನಲ್ ಮೊಕದ್ದಮೆ: ನ್ಯಾಯಾಲಯದ ಪ್ರಕರಣಗಳ ಬಗ್ಗೆ.

11. ಹೈ–ಕ ಭಾಗದ ಮೀಸಲಾತಿ ಬಯಸುವವರು ನಮೂನೆ ಡಿ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

12. ಕಛೇರಿ ಅಧೀಕ್ಷಕರುಗಳ ಖಾಲಿ ಹುದ್ದೆಗಳ ವಿವರ.

**ಕ್ರ.ಸಂ. 01 ರಿಂದ 12 ರವರೆಗಿನ ಎಲ್ಲಾ ಪ್ರತಿಗಳನ್ನು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು. ದೃಢೀಕರಿಸದ ಪ್ರತಿಗಳನ್ನು ಕಟ್ಟು ನಿಟ್ಟಾಗಿ ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.**

ಅರ್ಹ ಸಿಬ್ಬಂದಿಗಳ ಮೇಲ್ಕಂಡ ಎಲ್ಲಾ ಮಾಹಿತಿ ದಾಖಲೆಗಳನ್ನು ದೃಢೀಕರಿಸಿ, ನಿಗದಿತ ಅವಧಿಯೊಳಗೆ ಕಛೇರಿ ಮುಖ್ಯಸ್ಥರು ಹಾಗೂ ನಿಯಂತ್ರಣಾಧಿಕಾರಿಗಳು ಅಗತ್ಯ ಕ್ರಮವನ್ನು ವಹಿಸತಕ್ಕದ್ದು. ಸಕಾಲದಲ್ಲಿ ಮಾಹಿತಿ ಬಾರದೇ ನೌಕರರು ಪದೋನ್ನತಿಯಿಂದ ವಂಚಿತರಾದಲ್ಲಿ ಸಂಬಂಧಪಟ್ಟ ಕಚೇರಿ ಮುಖ್ಯಸ್ಥರನ್ನೇ ನೇರವಾಗಿ ಜವಾಬ್ದಾರರನ್ನಾಗಿಸಲಾಗುವುದು. ನಿಗದಿತ ಅವಧಿಯೊಳಗೆ ಮಾಹಿತಿ ಸಲ್ಲಿಸದೇ ನಂತರ ಬಂದಂತಹ ಕಾರ್ಯ ನಿರ್ವಹಣಾ ವರದಿಗಳನ್ನು ಪದೋನ್ನತಿಗೆ ಪರಿಗಣಿಸಲಾಗುವುದಿಲ್ಲ ಮತ್ತು ನ್ಯಾಯಾಲಯದಲ್ಲಿ ಈ ಬಗ್ಗೆ ದಾವೆ ಹೂಡಲು ಅನುಮತಿಯನ್ನು ನೀಡಲಾಗುವುದಿಲ್ಲ.

ಒಂದು ವೇಳೆ ನೌಕರರು ಪದೋನ್ನತಿ ನಿರಾಕರಿಸಿದ್ದಲ್ಲಿ ಲಿಖಿತ ರೂಪದಲ್ಲಿ ಪಡೆದು ಸೇವಾಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು. ಈ ನೌಕರರುಗಳಲ್ಲಿ ನಿವೃತ್ತಿ/ ಪದೋನ್ನತಿ/ ಮರಣ ಹೊಂದಿದ್ದಲ್ಲಿ ಅಂತಹವರ ಮಾಹಿತಿ ನೀಡುವುದು. ಈ ಮಾಹಿತಿ **<u>ಅತಿ ಜರೂರು</u>** ಎಂದು ಪರಿಗಣಿಸಿ **ದಿನಾಂಕ:10.03.2020** ರೊಳಗೆ ಮಾಹಿತಿ ಸಲ್ಲಿಸಲು ಸೂಚಿಸಿದೆ.

**<u>ವಿಶೇಷ ಸೂಚನೆ:–</u> ಮೇಲ್ಕಂಡ ಮಾಹಿತಿಯನ್ನು ಸಲ್ಲಿಸಿದ ಮಾತ್ರಕ್ಕೆ ಪದೋನ್ನತಿಗೆ ಅರ್ಹರೆಂದು ಭಾವಿಸತಕ್ಕದಲ್ಲ.**

**ನಿರ್ದೇಶಕರು,**
**ಆರೋಗ್ಯ ಮತ್ತು ಕು.ಕ. ಸೇವೆಗಳು,**
**ಬೆಂಗಳೂರು.**

**<u>ಪ್ರತಿಯನ್ನು:-</u>**

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ..................................... ಜಿಲ್ಲೆ.
2. ಆಯುಕ್ತರು, ಬಿಬಿಎಂಪಿ/ನಗರಸಭೆ/ಪುರಸಭೆ.........................................
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
4. ಡೀನ್ ಮತ್ತು ನಿರ್ದೇಶಕರು, ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು/ಮೈಸೂರು/ ಮಂಡ್ಯ/ಚಾಮರಾಜನಗರ/ಕೊಡಗು/ಹಾಸನ/ಶಿವಮೊಗ್ಗ/ ಬೆಳಗಾವಿ/ಹುಬ್ಬಳ್ಳಿ/ಉತ್ತರ ಕನ್ನಡ/ಗದಗ/ಬೀದರ್/ಕೊಪ್ಪಳ/ ರಾಯಚೂರು/ಕಲಬುರಗಿ/ಬಳ್ಳಾರಿ.
5. ಡೀನ್ ಮತ್ತು ನಿರ್ದೇಶಕರು, ಎಸ್‌ಡಿಎಸ್/ಮಿಂಟೋ ಕಣ್ಣಾಸ್ಪತ್ರೆ/ಬೌರಿಂಗ್ & ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು.
6. ಡೀನ್ ಮತ್ತು ನಿರ್ದೇಶಕರು, ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ, ...........................................
8. ಅಧೀಕ್ಷಕರು/ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ...........................................
9. ಪ್ರಾಂಶುಪಾಲರು, ಎ.ಎನ್.ಎಂ ತರಬೇತಿ ಕೇಂದ್ರ,.........................................
10. ತಾಲ್ಲೂಕು ಆರೋಗ್ಯಾಧಿಕಾರಿಗಳು,...........................................
11. ಜಿಲ್ಲಾ ಮಲೇರಿಯಾಧಿಕಾರಿಗಳು/ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿಗಳು/ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.........................................
12. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕ/ಸಮುದಾಯ ಆರೋಗ್ಯ ಕೇಂದ್ರ.........................
13. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
14. ಆದೇಶ ಪ್ರತಿ/ ಕಛೇರಿ ಪ್ರತಿ.